**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಒಎಸ್ 271/2020**

**ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿನಾಂಕ 25.01.2024 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಪಿ. ಡಿ. ವಕೀಲರಿಂದ ವಾದಿ ಪರ ವಕೀಲರುಃ**

ನನ್ನ ತಾತನ ಹೆಸರು ಕಾಳಯ್ಯ. ನನ್ನ ತಂದೆ ಹೆಸರು ಮಲ್ಲೇಗೌಡ. ನನ್ನ ಮುತ್ತಾತ ಹೆಸರು ಕಾಳಯ್ಯ. ನನ್ನ ಮುತ್ತಾತ ಕಾಳಯ್ಯರವರಿಗೆ ಒಟ್ಟು 15 ಎಕರೆ 29 ಗುಂಟೆ ಜಮೀನು ಇತ್ತು. ಸ.ನಂ.108/1, 108/2, 108/3, 108/4, 103/1, 103/2, 103/ಎ3 ರಲ್ಲಿ ನನ್ನ ಮುತ್ತಾತನಿಗೆ ಜಮೀನುಗಳಿವೆ. ಸ.ನಂ.124 ರಲ್ಲಿ 1 ಎಕರೆ 32 ಗುಂಟೆ ಜಮೀನು ನಮ್ಮ ಕುಟುಂಬದ್ದು ಎಂದರೆ ಸರಿ.

2. ನನ್ನ ಮುತ್ತಾತನಿಗೆ ಇಬ್ಬರು ಮಕ್ಕಳು. 1ನೇ ಕಾಳಯ್ಯ @ ಕಾಳೇಗೌಡ ಮತ್ತು 2 ನೇ ಮಲ್ಲಯ್ಯ @ ಮಲ್ಲೇಗೌಡ ಎಂದರೆ ಅವರುಗಳು ಕಾಳಯ್ಯ ಮತ್ತು ಮಲ್ಲಯ್ಯ ಎಂದು ಸಾಕ್ಷಿ ನುಡಿಯುತ್ತಾರೆ. ಅವರಿಬ್ಬರೂ ಮೇಲೆ ಹೇಳಿದ ಜಮೀನುಗಳನ್ನು ಭಾಗ ಮಾಡಿಕೊಂಡಿದ್ದಾರೆ ಆದರೆ ಸಮನಾಗಿ ಭಾಗ ಮಾಡಿಕೊಂಡಿಲ್ಲ. ಸರ್ವೆ ನಂ.108 ರಲ್ಲಿ ಒಟ್ಟು 4 ಪೋಡುಗಳಾಗಿವೆ ಮತ್ತು ಸರ್ವೆ ನಂ.103 ರಲ್ಲಿ ಒಟ್ಟು 3 ಪೋಡುಗಳಾಗಿವೆ.

3. ಸರ್ವೆ ನಂ.108/2 ರಲ್ಲಿ ಕಾಣುವ ಶಿವೇಗೌಡ ಬಿನ್ ಕೆಂಪೇಗೌಡ ಯಾರು ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಜಮೀನನ್ನು ನನ್ನ ದೊಡ್ಡಪ್ಪ ಕಾಳೇಗೌಡ ಬೋಗ್ಯ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ನನ್ನ ದೊಡ್ಡಪ್ಪ ಶಿವೇಗೌಡರವರಿಗೆ ಮಾರಿದ್ದಾರೆ ಎಂದರೆ ಸರಿಯಲ್ಲ. ಸ.ನಂ.103/1 ರಲ್ಲಿ ಜಯಮ್ಮ ಕೋಂ ಮಲ್ಲೇಗೌಡ ಯಾರು ಎಂದು ನನಗೆ ಗೊತ್ತಿಲ್ಲ. ಸ.ನಂ.103/1 ರ 8 ಗುಂಟೆ ಜಮೀನು ನಮ್ಮದು. ಸ.ನಂ.108/7 ರಲ್ಲಿ ಜಯಮ್ಮ ಕೋಂ ಮಲ್ಲೇಗೌಡ ಯಾರು ಎಂದು ನನಗೆ ಗೊತ್ತಿಲ್ಲ. ಜಯಮ್ಮ ಕೋಂ ಮಲ್ಲೇಗೌಡ ನಮ್ಮ ಊರಿನ ವಾಸಿ. ಅವರಿಗೆ ಮೇಲೆ ಹೇಳಿದ ಜಮೀನಿನ ಖಾತೆ ಹೇಗೆ ಬಂತು ಎಂದು ನಾನು ಪರಿಶೀಲಿಸಿಲ್ಲ. ಅವರನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇಲ್ಲ. ಸ.ನಂ.108/6 ರಲ್ಲಿ ತಮ್ಮೇಗೌಡ ಬಿನ್ ಲೇಟ್ ಕೆಂಪೇಗೌಡ ಯಾರು ಎಂದು ನನಗೆ ಗೊತ್ತಿಲ್ಲ.

ಶಿವೇಗೌಡ ಮತ್ತು ತಮ್ಮೇಗೌಡ ಇಬ್ಬರು ಅಣ್ಣತಮ್ಮಂದಿರು ಹಾಗೂ ಕೆಂಪೇಗೌಡನ ಮಕ್ಕಳು ಅವರಿಗೆ ನಾವು ಮತ್ತು ನಮ್ಮ ಕುಟುಂಬದವರು ಮೇಲೆ ಹೇಳಿದ ಜಮೀನುಗಳನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ.

4. ನನ್ನ ತಾತ ಕಾಳಯ್ಯ ಮತ್ತು ಅಜ್ಜಿ ಕಾಳಮ್ಮರವರಿಗೆ 1 ನೇ ಕಾಳೇಗೌಡ, 2 ನೇ ಮಲ್ಲೇಗೌಡ(ನನ್ನ ತಂದೆ), 3 ನೇ ಮಲ್ಲಮ್ಮ ಮತ್ತು 4 ನೇ ನಿಂಗಮ್ಮ ಎಂಬ ಮಕ್ಕಳು ಎಂದರೆ ಸರಿ. ಮಲ್ಲಮ್ಮ ಹಾಗೂ ನಿಂಗಮ್ಮ ಜೀವಿತವಾಗಿದ್ದಾರೆ ಎಂದರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅವರಿಬ್ಬರೂ ಇದೇ ನ್ಯಾಯಾಲಯದಲ್ಲಿ ನಮ್ಮ ವಿರುದ್ಧ ಭಾಗಾಂಶ ಕೋರಿ ದಾವೆ ಹೂಡಿದ್ದಾರೆ ಎಂದರೆ ಸರಿ. ಅವರಿಬ್ಬರನ್ನೂ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

5. ನನ್ನ ತಂದೆ ಹಾಗೂ ಅವರ ಸಹೋದರ ಯಾರಾರಿಗೆ ಎಷ್ಟೆಷ್ಟು ಎಕರೆ ಜಮೀನು ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಖರೀದಿದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಾತನ ಸಹೋದರ ಮಲ್ಲೇಗೌಡರಿಗೆ ಒಬ್ಬಳೇ ಮಗಳು ಲಕ್ಷ್ಮಮ್ಮ ಎಂದರೆ ಸರಿ. ಪ್ರತಿವಾದಿಗಳು ಸದರಿ ಲಕ್ಷ್ಮಮ್ಮನ ಮಕ್ಕಳು ಎಂದರೆ ಸರಿ. ಲಕ್ಷ್ಮಮ್ಮರವರ ತಂದೆಯ ಅರ್ಧ ಹಿಸ್ಸೆ ಲಕ್ಷ್ಮಮ್ಮರವರಿಗೆ ಹೋಗಿದೆ ಎಂದರೆ ಸರಿ. ನನ್ನ ತಾತ ಮೃತಪಟ್ಟ ದಿನಾಂಕ ಗೊತ್ತಿಲ್ಲ. ಅವರ ಮರಣ ದೃಡಿಕರಣ ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅದನ್ನು ಹಾಜರುಪಡಿಸಲು ತೊಂದರೆ ಇದೆಯೇ ಎಂಬ ಪ್ರಶ್ನೆಗೆ ಹಾಜರುಪಡಿಸಲು ನನಗೆ ದಿನಾಂಕ ಗೊತ್ತಿಲ್ಲ ಎಂದು ನುಡಿಯುತ್ತಾರೆ.

6. 1954 ಕ್ಕೂ ಹಿಂದೆ ನನ್ನ ತಾತ ಕಾಳಯ್ಯ ಮತ್ತು ಅವರ ಸಹೋದರ ನನ್ನ ಮುತ್ತಾತನ ಆಸ್ತಿಗಳನ್ನು ವಿಭಾಗ ಮಾಡಿಕೊಂಡು ಅವರವರ ಹಿಸ್ಸೆಯಲ್ಲಿ ಸ್ವಾಧೀನದಲ್ಲಿದ್ದರು ಎಂದರೆ ಸಾಕ್ಷಿಯು ಅವರಿಬ್ಬರ ಹೆಸರಿನಲ್ಲಿ ಖಾತೆ ಜಂಟಿಯಾಗಿ ಬರುತ್ತಿತ್ತು ಎಂದು ನುಡಿಯುತ್ತಾರೆ. ಸದರಿ ವಿಭಾಗದಂತೆ ಸ.ನಂ.103/1, 103/3, 108/2, 108/3 ಮತ್ತು 108/4 ಒಟ್ಟು 7 ಎಕರೆ 38 ಗುಂಟೆ ಮಲ್ಲೇಗೌಡರವರ ಹಿಸ್ಸೆಗೆ ಬಂದಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜಂಟಿ ಖಾತೆ ಇತ್ತು ಎಂದು ನುಡಿಯುತ್ತಾರೆ. ನಿಪಿ 18 ರಿಂದ 21 ರ ಪ್ರಕಾರ ಸದರಿ ಸ್ವತ್ತುಗಳು ಮಲ್ಲೇಗೌಡರ ಹೆಸರಿನಲ್ಲಿ ಪ್ರತ್ಯೇಕವಾಗಿ ನಮೂದಾಗಿದೆ ಎಂದರೆ ಸರಿಯಲ್ಲ. ಮಲ್ಲೇಗೌಡರು ಮೃತಪಟ್ಟ ನಂತರ ಸದರಿ ಸ್ವತ್ತುಗಳ ಖಾತೆ ಅವರ ಒಬ್ಬಳೇ ಮಗಳು ಲಕ್ಷ್ಮಮ್ಮರವರ ಹೆಸರಿಗೆ ಬಂದಿದ್ದು, ತದನಂತರ ಪ್ರತಿವಾದಿಗಳ ಹೆಸರಿಗೆ ಬಂದಿದೆ

ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂ.108/2, 108/3 ಮತ್ತು 108/4 ಲಕ್ಷ್ಮಮ್ಮನ ಹೆಸರಿನಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ.

7. ದಿಃ 29.09.1954 ರಂದು ಮಲ್ಲೇಗೌಡ ರವರು ಅವರ ಮಗಳ ಹೆಸರಿಗೆ ಮರಣ ಶಾಸನ ಪತ್ರ ಬರೆದಿದ್ದು ಅದರಲ್ಲಿರುವ ಸ್ವತ್ತುಗಳ ಚೆಕ್ಕುಬಂದಿಯಲ್ಲಿ ನನ್ನ ತಾತ ಕಾಳೇಗೌಡರವರಿಗೆ ಬಂದಿರುವ ಹಿಸ್ಸೆಯ ಬಗ್ಗೆ ನಮೂದು ಇದೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಮಲ್ಲೇಗೌಡರವರ ಹೆಸರಿಗೆ ಬಂದಿರುವ ಆಸ್ತಿಗಳನ್ನು ಮಾತ್ರ ಸೇರಿಸಿ ಕಾಳಯ್ಯ ರವರಿಗೆ ಬಂದಿರುವ ಆಸ್ತಿಯನ್ನು ಈಗಾಗಲೇ ಮಾರಾಟ ಮಾಡಿದ್ದು ಅದನ್ನು ಬಚ್ಚಿಟ್ಟು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

8. ನನ್ನ ತಂದೆ, ದೊಡ್ಡಪ್ಪ ಮತ್ತು ನಮ್ಮ ಕುಟುಂಬದ ಇತರರು ಯಾವುದೇ ಆಸ್ತಿಯನ್ನು ಮಾರಾಟ ಮಾಡಿಲ್ಲ. ಸ.ನಂ.124, 108/2, 103/1, 108/7 ಮತ್ತು 108/6 ಆಸ್ತಿಗಳನ್ನು ನಾವು ಈಗಾಗಲೇ ಮಾರಾಟ ಮಾಡಿ ಪ್ರತಿವಾದಿಗಳ ಆಸ್ತಿಯ ಮೇಲೆ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಮಾರಾಟ ಮಾಡಿದ್ದರೂ ಮಾರಾಟ ಮಾಡಿಲ್ಲ ಎಂದು, ನನ್ನ ಇಬ್ಬರು ಅತ್ತೆಯಂದಿರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡದೆ ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅವರ ತಾಯಿಯ ಪಾಲನ್ನು ಅವರ ಸಹೋದರಿಯರಿಂದ ಹಕ್ಕು ಖುಲಾಸೆ ಮಾಡಿಸಿಕೊಂಡ ನಂತರ ಸದರಿ ಸ್ವತ್ತುಗಳಲ್ಲಿ ನಮಗು ಪಾಲು ಇದೆ ಎಂದು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

9. ನನ್ನ ತಾಯಿಯ ಹೆಸರು ಸರೋಜಮ್ಮ. ಮಹದೇವಿ ನನ್ನ ಸ್ವಂತ ಅಕ್ಕ. ಸ.ನಂ.124 ರಲ್ಲಿ 30 ಗುಂಟೆ ಜಮೀನಿನ ಖಾತೆ ನನ್ನ ಅಕ್ಕನ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿಗೆ ಈ ಸಂಬಂದ ಒಂದು ಪಹಣಿ ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಸದರಿ ಜಮೀನು ನನ್ನ ಅಕ್ಕನಿಗೆ ನನ್ನ ತಂದೆಯ ಮೂಲಕ ಅಂದರೆ ಪೌತಿ ಖಾತೆಯ ಮೇರೆಗೆ ಬಂದಿದೆ. ನನ್ನ ತಂದೆ ಮತ್ತು ಅವರ ಸಹೋದರ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ. ನನ್ನ ದೊಡ್ಡಪ್ಪ ಕಾಳೇಗೌಡರವರಿಗೆ ನಿಂಗರಾಜ ಮತ್ತು ಮಲ್ಲೇಶ ಎಂಬ ಇಬ್ಬರು ಮಕ್ಕಳು. ಜಯಮ್ಮ ಕೋಂ ಮಲ್ಲೇಗೌಡ ಯಾರು ಎಂದು ನನಗೆ ಗೊತ್ತಿಲ್ಲ. ಶಿವೆಗೌಡ ಮತ್ತು ಮಲ್ಲೇಗೌಡ ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ.

10. ದಾವೆಯಲ್ಲಿ ಯಾವ ಯಾವ ಪೋಡುಗಳಲ್ಲಿ ಎಷ್ಟೆಷ್ಟು ವಿಸ್ತೀರ್ಣ ಜಮೀನು ಇದೆ ಎಂದು ನಮೂದಿಸಿಲ್ಲ ಎಂದರೆ ಸರಿ. ನಮ್ಮ ದಾವೆ ಅಪೂರ್ಣವಾಗಿದ್ದು ಯಾವ ಪೋಡಿನಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪ್ರತಿವಾದಿಗಳ ಸ್ವತ್ತಾಗಿದ್ದು ಅದರಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ